# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್–2318/2016

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿನಾಂಕ: 26/04/2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರ ಅನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀರಾಂಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಹದೇವಪುರ ಗ್ರಾಮದ ಜಂಜರು ನಂ. 2423, ಸ್ವತ್ತಿನ ನಂ. 149/2ಬಿ ನಿವೇಶನ ನಂ. 5 ಅಳತೆ 60 * 50 ಅಡಿಗಳು ಸ್ವತ್ತನ್ನು ದೂರುದಾರರ ಹೆಸರಿಗೆ ನಮೂದಾಗಿರುವ ಬಗ್ಗೆ ಕಾನೂನು ರೀತ್ಯಾ ನಮೂನೆ 11ಬಿ ಯನ್ನು ರದ್ದುಪಡಿಸಲು ಸೂಕ್ತ ಕ್ರಮ ವಹಿಸುವಂತೆ ತಿಳಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ವರದಿಯ ನಡವಳಿಕೆ–ಕುರಿತು.,

*****

ಶ್ರೀ ಕಪನಿ ಬಿನ್ ಲೇಟ್ ಮಧು, ಮನೆ ನಂ. 530, ಬಿ ಬ್ಲಾಕ್, 3ನೇ ಕ್ರಾಸ್, ಮಾನಂದವಾಡಿ ರಸ್ತೆ, ಮಹದೇವಪುರ, ಮೈಸೂರು ಇವರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ ಹನುಮಂತು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶ್ರೀರಾಂಪುರ ಗ್ರಾಮ ಪಂಚಾಯತ್, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ, (2) ಶ್ರೀ ಪ್ರಕಾಶ್, ಕಾರ್ಯದರ್ಶಿ, ಶ್ರೀರಾಂಪುರ ಗ್ರಾಮ ಪಂಚಾಯತ್, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ ಮತ್ತು, (3) ಶ್ರೀ ಬಸವರಾಜು, ಬಿಲ್ ಕಲೆಕ್ಟರ್, ಶ್ರೀರಾಂಪುರ ಗ್ರಾಮ ಪಂಚಾಯತ್, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ '1 ರಿಂದ 3ನೇ ಎದುರುದಾರರುಗಳು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ದಾಖಲಿಸಿ, ಶ್ರೀರಾಂಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಹದೇವಪುರ ಗ್ರಾಮದ ಜಂಜರು ನಂ. 2423, ಸ್ವತ್ತಿನ ನಂ. 149/2ಬಿ ನಿವೇಶನ ನಂ. 5 ಅಳತೆ 60 * 50 ಅಡಿಗಳು ದೂರುದಾರರಿಗೆ ಸೇರಿದ್ದಾಗಿರುತ್ತದೆಂದು, ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ನೀಡಲಾಗಿರುವ

ಫಾರಂ 11–ಬಿ ರಲ್ಲಿ ಸದರಿ ಸ್ವತ್ತಿನ ಸಂಖ್ಯೆಯನ್ನು ಗ್ರಾಮ ಪಂಚಾಯತಿಯವರು 2413:149:2ಬಿ ಎಂಬುದಾಗಿ ತಪ್ಪಾಗಿ ನಮೂದಿಸಿರುತ್ತಾರೆಂದು ತಿಳಿಸಿರುತ್ತಾರೆ. ಸದರಿ ತಪ್ಪು ನಮೂದನೆಯನ್ನು ಸರಿ ಮಾಡಿಕೊಡುವಂತೆ ಗ್ರಾಮ ಪಂಚಾಯತಿಯವರನ್ನು ದಿನಾಂಕ: 08/08/2016 ರಂದು ಕೋರಲಾಗಿ, ಸದರಿಯವರು ತಪ್ಪಾಗಿ ನಮೂದಿಸಿರುವ ಫಾರಂ ನಂ. 11–ಬಿ ಯಲ್ಲಿಯೇ ತಿದ್ದುಪಡಿ ಮಾಡಿಕೊಡುವುದಗಿ ಹಾಗೂ ಹೊಸದಾಗಿ ಫಾರಂ ನಂ. 11–ಬಿ ಕೊಡುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಇದು ಅಲ್ಲದೇ, ಗ್ರಾಮ ಪಂಚಾಯತಿಗೆ ಬಂದು ಈ ರೀತಿ ಕೇಳಿದ್ದಲ್ಲಿ ದೂರುದಾರರ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡುವುದಾಗಿ ಬೆದರಿಕೆ ಹಾಕುತ್ತಾರೆಂದು, ಈ ಬಗ್ಗೆ ವಿದ್ಯಾರಣ್ಯಪುರಂ ಪೊಲೀಸ್ ಠಾಣೆಗೆ ದೂರು ನೀಡಲು ಹೋಗಲಾಗಿ, ಸದರಿಯವರು ದೂರು ಸ್ವೀಕರಿಸಲು ನಿರಾಕರಿಸಿರುತ್ತಾರೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರ ದೂರಿಗೆ ಸಂಬಂಧಿಸಿದಂತೆ, 1 ಮತ್ತು 2ನೇ ಎದುರುದಾರರುಗಳು ದಿನಾಂಕ: 02/11/2016 ರಂದು ಒಂದೇ ರೀತಿಯ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಗಳಲ್ಲಿ, ದೂರುದಾರರ ಕೋರಿಕೆಯಂತೆ ಕಡತವನ್ನು ಪರಿಶೀಲಿಸಲಾಗಿ, ಶ್ರೀರಾಂಪುರ ಸರ್ವೆ ನಂ. 149/2ಬಿ ರಲ್ಲಿ 0.19 ಗುಂಟೆ ಜಮೀನು ದೂರುದಾರರ ತಂದೆಯಾದ ಮಾಧು ಬಿನ್ ಕಪನಯ್ಯ ರವರಿಗೆ ಸೇರಿರುವುದಾಗಿ ಆರ್.ಟಿ.ಸಿ.,ಯಲ್ಲಿ ದಾಖಲಾಗಿರುತ್ತದೆ. ಹಾಗೂ ಮಾಧು ಬಿನ್ ಕಪನಯ್ಯ ರವರ ಪತ್ನಿ ಮಾದಮ್ಮ ಎಂಬುವವರಾಗಿರುತ್ತಾರೆಂದು, ಇವರಿಗೆ ಒಟ್ಟು 7 ಜನ ಮಕ್ಕಳಿರುತ್ತಾರೆಂದು ತಿಳಿಸಿರುತ್ತಾರೆ. ಮತ್ತೆ ಮುಂದುವರೆದು, ಶ್ರೀ ಮಾಧು ಬಿನ್ ಕಪನಯ್ಯ ರವರು ಮರಣ ಹೊಂದಿದ ನಂತರ, ಮೇಲ್ಕಂಡ 0.19 ಗುಂಟೆ ಜಮೀನು ಅವರ ಪತ್ನಿಯಾದ ಶ್ರೀಮತಿ ಮಾದಮ್ಮ ರವರ ಹೆಸರಿಗೆ ಮ್ಯುಟೇಷನ್ ಆಗಿರುವುದಿಲ್ಲ, ಸಂಗತಿಗಳೆಲ್ಲಾ ಹೀಗಿರುವಾಗ ಶ್ರೀಮತಿ ಮಾದಮ್ಮ ರವರು ನೋಂದಾವಣಿಯಾಗದ ದಾನ ಪತ್ರದ ಮುಖಾಂತರ ದಿನಾಂಕ: 20/04/2010 ರಂದು 7 ಜನ ಮಕ್ಕಳ ಪೈಕಿ ದೂರುದಾರರ ಒಬ್ಬರ ಹೆಸರಿಗೆ ಮಾತ್ರ ಉಳಿದ 6 ಜನ ಮಕ್ಕಳ ಸಹಿಯನ್ನು ಪಡೆಯದೇ, ಏಕಾಏಕಿಯಾಗಿ 19 ಗುಂಟೆ ಪೈಕಿ ಪೂರ್ವ–ಪಶ್ಚಿಮ 50 ಅಡಿಗಳು, ದಕ್ಷಿಣ –ಉತ್ತರ 60 ಅಡಿಗಳುಳ್ಳ ಜಾಗ ಮತ್ತು ಈ ಜಾಗದಲ್ಲಿ ಕಟ್ಟಿರುವ 5 ಚದರ ಕಲ್ನಾರ್ ಶೀಟಿನ ಮನೆಯನ್ನು ದಾನವಾವಾಗಿ ದೂರುದಾರರ ಹೆಸರಿಗೆ ನೀಡಿರುತ್ತಾರೆಂದು ತಿಳಿಸಿರುತ್ತಾರೆ.

3. ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು, ದೂರುದಾರರಿಗೆ ಕಳುಹಿಸಿ, ಪ್ರತ್ಯುತ್ತರವನ್ನು ಸಲ್ಲಿಸುವಂತೆ ತಿಳಿಸಲಾಗಿದ್ದು, ದೂರುದಾರರು ಈ ಕಛೇರಿಯಿಂದ ಕಳುಹಿಸಲಾದ ನೋಟಿಸ್‌ನ್ನು ಸ್ವೀಕರಿಸಿದರೂ ಸಹಾ, ಯಾವುದೇ ಪ್ರತ್ಯುತ್ತರವನ್ನು ನಿಗಧಿತ ದಿನಾಂಕದೊಳಗಾಗಿ ಸಲ್ಲಿಸಿರುವುದಿಲ್ಲ. ಆದ್ದರಿಂದ, ಸದರಿ ಪ್ರಕರಣದಲ್ಲಿ ದೂರುದಾರರ ಉತ್ತರಗಳೇನೂ ಇರುವುದಿಲ್ಲವೆಂದು ಪರಿಗಣಿಸಲಾಗಿದೆ.

4. ಈ ಸಂಬಂಧವಾಗಿ, ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಗ್ರೇಡ್–1 ಗ್ರಾಮ ಪಂಚಾಯತಿ ಕಾರ್ಯದರ್ಶಿ, ಶ್ರೀರಾಂಪುರ ಗ್ರಾಮ ಪಂಚಾಯತಿ ರವರಿಂದ, ದೂರುದಾರರ ಹೆಸರಿಗೆ ಮೇಲ್ಕಂಡ ಸ್ವತ್ತಿಗೆ ಸಂಬಂಧಪಟ್ಟಂತೆ ನಮೂನೆ 11ಬಿ ಯನ್ನು ವಿತರಿಸಿರುವ ಕಾರ್ಯದರ್ಶಿ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಬಗ್ಗೆ ಮಾಹಿತಿಯನ್ನು ಸಲ್ಲಿಸುವಂತೆ ತಿಳಿಸಿಲಾಗಿ, ಸದರಿಯವರು (1) ಶ್ರೀ ಕೆ.ಸೋಮಯ್ಯ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಶ್ರೀರಾಂಪುರ ಗ್ರಾಮ ಪಂಚಾಯತ್, ಮೈಸೂರು ಜಿಲ್ಲೆ (ಹಾಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಬನ್ನಿಕುಪ್ಪೆ ಗ್ರಾಮ ಪಂಚಾಯತ್, ಹುಣಸೂರು ತಾಲ್ಲೂಕು) ಹಾಗೂ, (2) ಶ್ರೀ ಹೆಚ್.ಸಿ.ರಾಜಣ್ಣ, ಹಿಂದಿನ ದ್ವಿತೀಯಾ ದರ್ಜೆ ಸಹಾಯಕರು, ಶ್ರೀರಾಂಪುರ ಗ್ರಾಮ ಪಂಚಾಯತ್, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ (ಹಾಲಿ ಕಾರ್ಯದರ್ಶಿ ಗ್ರೇಡ್–1, ಪ್ರಭಾರ ಗೋಪಾಲಪುರ ಗ್ರಾಮ ಪಂಚಾಯತ್, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ) ಎಂದು ತಿಳಿಸಿರುತ್ತಾರೆ. ಆದ್ದರಿಂದ, ಸದರಿ ಇಬ್ಬರು ಅಧಿಕಾರಿಗಳನ್ನು ಗೌರವಾನ್ವಿತ ಉಪಲೋಕಾಯುಕ್ತರು 4 ಮತ್ತು 5ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ನಮೂದಿಸಿ ನಂತರ, ಸದರಿಯವರುಗಳಿಗೆ ದೂರುದಾರರು ಸಲ್ಲಿಸಿರುವ ದೂರಿನ ಪ್ರತಿ ಹಾಗೂ ಅಡಕಗಳನ್ನು ಕಳುಹಿಸಿ, ಈ ಬಗ್ಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿ, ಸದರಿಯವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ದೂರಿನ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಪ್ರಸ್ತುತ ಹಂತದಲ್ಲಿ ಸದರಿ 4 ಮತ್ತು 5ನೇ ಎದುರುದಾರರುಗಳ ಆಕ್ಷೇಪಣೆಗಳನ್ನು ಒಪ್ಪಲಾಗುವುದಿಲ್ಲ.

5. ದೂರಿನಲ್ಲಿ ಇರುವ ಆಪಾದನೆಗಳು, ಎದುರುದಾರರ ಆಕ್ಷೇಪಣೆಗಳು ಹಾಗೂ ತನಿಖಾ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ 4 ಮತ್ತು 5ನೇ ಎದುರುದಾರರು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

- ದೂರುದಾರರ ತಂದೆಯಾದ ಶ್ರೀ ಮಾಧು ಬಿನ್ ಕಪನಯ್ಯ ರವರ ಹೆಸರಿನಲ್ಲಿ ಶ್ರೀರಾಂಪುರ ಗ್ರಾಮದ ಸರ್ವೆ ನಂ. 149/2ಬಿ ರಲ್ಲಿ ಒಟ್ಟು 0.19 ಗುಂಟೆ ಜಮೀನು ಇರುತ್ತದೆ.
- ಶ್ರೀ ಮಾಧು ಬಿನ್ ಕಪನಯ್ಯ ರವರ ಪತ್ನಿ ಶ್ರೀಮತಿ ಮಾದಮ್ಮ ಎಂಬುವವರಾಗಿದ್ದು, ಸದರಿಯವರಿಗೆ ಒಟ್ಟು 7 ಜನ ಮಕ್ಕಳಿರುತ್ತಾರೆ ದೂರುದಾರರನ್ನ ಒಳಗೊಂಡಂತೆ.
- ಶ್ರೀ ಮಾಧು ಬಿನ್ ಕಪನಯ್ಯ ರವರ ಮರಣ ಹೊಂದಿದ ನಂತರ ಸದರಿ ಮೇಲ್ಕಂಡ 0.19 ಗುಂಟೆ ಜಮೀನು ಶ್ರೀಮತಿ ಮಾದಮ್ಮ ರವರ ಹೆಸರಿಗೆ ಮ್ಯುಟೇಷನ್ ಆಗಿರುವುದಿಲ್ಲ.
- ಸಂಗತಿಗಳೆಲ್ಲಾ ಹೀಗಿರುವಾಗ, ಶ್ರೀಮತಿ ಮಾದಮ್ಮ ರವರು ನೋಂದಾವಣಿಯಾಗದ ದಾನ ಪತ್ರದ ಮುಖಾಂತರ ದಿನಾಂಕ: 20/04/2010 ರಂದು, ದೂರುದಾರರ ಹೆಸರಿಗೆ 19 ಗುಂಟೆ ಪೈಕಿ ಪೂರ್ವ–ಪಶ್ಚಿಮ 50 ಅಡಿಗಳು ದಕ್ಷಿಣ–ಉತ್ತರ 60 ಅಡಿಗಳುಳ್ಳ ಜಾಗ ಮತ್ತು ಈ ಜಾಗದಲ್ಲಿ ಕಟ್ಟಿರುವ 5 ಚದರ ಕಲ್ನಾರ್ ಶೀಟಿನ ಮನೆಯನ್ನು ದಾನವಾಗಿ ನೀಡಿರುತ್ತಾರೆ. ಸದರಿ ದಾನ ಪತ್ರಕ್ಕೆ ಶ್ರೀಮತಿ ಮಾದಮ್ಮ ರವರು ಉಳಿದ 6 ಜನ ಮಕ್ಕಳ ಸಹಿಗಳನ್ನು ಮಾಡಿರುವುದಿಲ್ಲ.
- 4 ಮತ್ತು 5ನೇ ಎದುರುದಾರರುಗಳು ಮೇಲ್ಕಾಣಿಸಿದ ಅಂಶಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿದೇ ಏಕಾಏಕಿಯಾಗಿ ನೋಂದಾವಣಿಯಾಗದ ದಾನ ಪತ್ರದ ಆಧಾರದ ಮೇಲೆ ಕಾನೂನು ಬಾಹಿರವಾಗಿ ದೂರುದಾರರ ಹೆಸರಿಗೆ ಮೇಲ್ಕಂಡ ಪ್ರಶ್ನಿತ ಸ್ವತ್ತನ್ನು ನಮೂನೆ 11ಬಿ ಯನ್ನು ವಿತರಿಸಿರುವ ಮೂಲಕ ವರ್ಗಾಯಿಸಿ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

6. ದೂರುದಾರರು ದೂರು ಹಾಗೂ ತನಿಖಾಧಿಕಾರಿಗಳ ವರದಿ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ '4 ಮತ್ತು 5ನೇ ಎದುರುದಾರರುಗಳ' ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, '4 ಮತ್ತು 5ನೇ ಎದುರುದಾರರುಗಳು' ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

7. ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಶ್ರೀರಾಂಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಹದೇವಪುರ ಗ್ರಾಮದ ಜಂಜರು ನಂ. 2423, ಸ್ವತ್ತಿನ ನಂ. 149/2ಬಿ ನಿವೇಶನ ನಂ. 5 ಅಳತೆ 60 * 50 ಅಡಿಗಳು ಸ್ವತ್ತನ್ನು ದೂರುದಾರರ ಹೆಸರಿಗೆ ನಮೂದಾಗಿರುವ ಬಗ್ಗೆ ಕಾನೂನು ರೀತ್ಯಾ ನಮೂನೆ 11ಬಿ ಯನ್ನು ರದ್ದುಪಡಿಸಲು ಸೂಕ್ತ ಕ್ರಮ ವಹಿಸುವಂತೆ ತಿಳಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ **ಒಂದು ತಿಂಗಳ ಅವಧಿಯೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

26/4/17.

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**

26/4/17